‘ರಾಜಕೀಯವಾಗಿ ಸರಿ’ಯೆನಿಸುವ ನಿಲುವು ತೆಗೆದುಕೊಳ್ಳುವವರ ಬಗ್ಗೆ ಅಸಹನೆ ಇನ್ನೂ ಹೆಚ್ಚಾಗುತ್ತದೆ. ಇದೇ ಹಿನ್ನೆಲೆಯಲ್ಲಿಯೇ ನಾವು ಸಬಲೀಕರಣದ ಸರ್ಕಾರಿ ಯೋಜನೆಗಳನ್ನು ನೋಡಬೇಕು. ಅವು ಹೆಣ್ಣಿನ ಪರ ಎನ್ನುವ ಲೇಬಲ್ ಹಚ್ಚಿಕೊಂಡಿರುತ್ತವೆ, ಆದರೆ ಬಹುತೇಕ ಸಂದರ್ಭಗಳಲ್ಲಿ ಅವು ಕಾರ್ಯ ನಿರ್ವಹಿಸುವುದು ಮಾತ್ರ ಗಂಡಸರ ಅನುಕೂಲಕ್ಕೆ ತಕ್ಕಂತೆ. ಹೆಣ್ಣಿನ ವಿಷಯದಲ್ಲಿ ‘ಕ್ರಿಟಿಕಲ್ ಇನ್‌ಸೈಡರ್’ ಆಗಲು ಒತ್ತಾಯಿಸುವ ಸನ್ನಿವೇಶಗಳು ತಮ್ಮೆದುರಿಗೇ ನಡೆಯುತ್ತಿರುವಾಗಲೂ, ತಾವೇ ಅದರ ಪರೋಕ್ಷ ಭಾಗವಾಗಿರುವಾಗಲೂ, ತಮ್ಮನ್ನು ತಾವೇ ಅತ್ಯಂತ ಸಂವೇದನಾಶೀಲ ಎಂದು ಕರೆದುಕೊಳ್ಳುವವರೂ ಕೂಡ ಕಣ್ಣಿರುವ ಕುರುಡರಂತೆ ವರ್ತಿಸುವುದು, ಸಾಧಾರವಾಗಿ ಇದನ್ನು ಮಂಡಿಸುವ ಕೃತಿಗಳು ಬಂದಾಗಲೂ ಅವುಗಳನ್ನು ಕಡೆಗಣ್ಣಿನಿಂದ ನೋಡಿ ಪಕ್ಕಕ್ಕೆ ಸರಿಸುವವರ ಜೊತೆಯೇ ನಾವು ವೇದಿಕೆ ಹಂಚಿಕೊಳ್ಳುವಾಗಲಂತೂ ಹಿಂಸೆಯಾಗುತ್ತಿರುತ್ತದೆ.


ಲೈಂಗಿಕ ದೌರ್ಜನ್ಯಕ್ಕೆ ಒಳಗಾದ, ವೇಶ್ಯಾವಾಟಿಕೆಗಳಲ್ಲಿ ಸಿಕ್ಕಿ ಜೀವಂತ ಶವಗಳೇ ಆಗಿಬಿಟ್ಟಿರುವ ಹೆಣ್ಣುಮಕ್ಕಳ ಪುನರ್ವಸತಿಯ ಬಗ್ಗೆ ಅಧಿಕಾರಿಯೊಬ್ಬನೊಂದಿಗೆ ಮಾತನಾಡುತ್ತಿರುವಾಗ ಈ ವಿಚಾರದ ಮಾತುಗಳನ್ನು ಕೇಳುತ್ತಿರುವ ಗಳಿಗೆಯಲ್ಲೇ, ಲಕ್ಷ-ಕೋಟಿ ಗಂಡುಗಳ, ಗಂಡಾಳಿಕೆಯ ಪ್ರತಿನಿಧಿಯಂತೆ ಆ ಅಧಿಕಾರಿ, “ಪುನರ್ವಸತಿ ವಿಚಾರನೆಲ್ಲಾ ಬಿಟ್ಟು ಬಿಡಿ ಮೇಡಂ, ಎಲ್ಲಿತನ ‘ಡಿಮ್ಯಾಂಡ್’ ಇರುತ್ತೋ ಅಲ್ಲಿತನಕ ‘ಸಪ್ಲೈ’ ಇರ್ಲೇಬೇಕು” ಎಂದು ಅಸಹನೆಯಲ್ಲಿ ಚೀರುತ್ತಾನೆ. ಮಾತನಾಡುತ್ತಿದ್ದ ರೂಪ ಹಾಸನ, ‘ಹಾಗಾದ್ರೆ ನಿಮ್ಮ ಮನೆ ಹೆಣ್ಣುಮಕ್ಕಳನ್ನು ಸಪ್ಲೈ ಮಾಡ್ತಿರೇನ್ರೀ’ ಎಂದು ಫೋನ್ ಕರೆ ಕತ್ತರಿಸುತ್ತಾರೆ.

ಸ್ಥೂಲವಾಗಿ ಇದು ರೂಪ ಹಾಸನ ಅವರ ‘ಇವಳ ಭಾರತ’ ಕೃತಿಯ ತಳಹದಿ, ಕಟ್ಟಡ, ದೇಹ, ಆತ್ಮ ಎಲ್ಲವೂ ಎನ್ನಬಹುದು.

ಇಷ್ಟಕ್ಕೂ ‘ಇವಳು’ ಯಾರು? ಗಂಡಸರ ‘ಅವಳೇ’ ನಮ್ಮ ‘ಇವಳು’.

ಅವಳು ಮತ್ತು ಇವಳ ನಡುವೆ ಭೂಮಿ ಆಕಾಶದ ವ್ಯತ್ಯಾಸವಿದೆ ಎನ್ನುವುದನ್ನು, ಇವಳ ಅವಸ್ಥೆಯ ನೈತಿಕ, ಸಾಮಾಜಿಕ ಹೊಣೆಗಾರಿಕೆಯನ್ನು ಮಾತ್ರ ಬಹುಪಾಲು ಹೊರಬೇಕಾಗಿರುವುದು ಗಂಡಾಳಿಕೆ, ಅವರ ನಿಯಂತ್ರಣದಲ್ಲೇ ಇರುವ ಪ್ರಭುತ್ವ ಮತ್ತು ಸಂಸ್ಥೆಗಳು ಎನ್ನುವುದನ್ನು ರೂಪ ಹಾಸನ ಇವರ ಈ ಕೃತಿ ಶಂಕೆಯಿಲ್ಲದಂತೆ ಪ್ರತಿಪಾದಿಸುತ್ತದೆ, ಸಾಧಾರವಾಗಿ ಸ್ಥಾಪಿಸುತ್ತದೆ, ಆರ್ದ್ರತೆಯಲ್ಲಿ ನಿರೂಪಿಸುತ್ತದೆ, ವ್ಯಗ್ರತೆಯಲ್ಲಿ ತನ್ನ ಹಕ್ಕೊತ್ತಾಯಗಳನ್ನು ಕೈಯೆತ್ತಿ, ತಲೆಯೆತ್ತಿ ಪ್ರಶ್ನಿಸುತ್ತಲೇ ತನ್ನ ವಾದವನ್ನು ಮಂಡಿಸುತ್ತದೆ.

ರೂಪ ಅವರು ಕಳೆದ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ




**ಇವಳ ಭಾರತ**
ಲೇ : ರೂಪ ಹಾಸನ
ಪುಟ: 464, ಬೆಲೆ: ₹ 400
ಪ್ರ: ಪಲ್ಲವ ಪ್ರಕಾಶನ, ಬಳ್ಳಾರಿ
ಫೋನ್: 8880087235